‘ವೈ ಶುಡ್ ಟ್ರೈ? ಇದು ಅವರವರ ಇಷ್ಟದ ವಿಷಯ, ನನಗೆ ಡ್ರಿಂಕ್ಸ್ ಮಾಡೋದು ಇಷ್ಟವಿಲ್ಲ’.

‘ನೀನೆಂಥ ವುಮೆನ್ ಲಿಬರೇಶನ್ ಮಹಿಳೆ?’ ರಿತಿಕ್ ನಕ್ಕು ಹೇಳುತ್ತಿದ್ದ.

‘ಲಿಬರೇಶನ್ ಅಂದ್ರೆ ಮದ್ಯ ಸೇವನೆ ಅಲ್ಲ, ಮದ್ಯವನ್ನು ಸೇವಿಸುವ ಮಹಿಳೆಯರೆಲ್ಲಾ ಸ್ವತಂತ್ರವಾಗಿರಬೇಕಾದ ಅವಶ್ಯಕತೆಯಿಲ್ಲ. ಸ್ವಾತಂತ್ರ್ಯಪ್ರಿಯ ಮಹಿಳೆಯರು ಮದ್ಯವನ್ನು ಸೇವಿಸುವ ಆವಶ್ಯಕತೆಯಿಲ್ಲ, ರಿತಿಕ್ ಶರ್ಮಾ’, ನಾನು ನಗುತ್ತಾ ಹೇಳಿದೆ.

‘ಮನಸ್ಸಿಗೆ ಇಷ್ಟವಾದ ಪುರುಷನೊಂದಿಗೆ ಸೆಕ್ಸ್ ಮಾಡಲು ಅವಕಾಶವಿದೆಯೇ?’ ರಿತಿಕ್‌ಗೆ ಉತ್ತರಗಳು ಹೊಳೆಯದಿದ್ದಾಗ, ಅವನು ‘ಸೆಕ್ಸ್’ ವಿಷಯವನ್ನು ಪ್ರಸ್ತಾಪ ಮಾಡುತ್ತಾನೆ.

‘ಹೌದೌದು! ಇದರಲ್ಲೇನು?’ ನಾನೂ ಅಸಡ್ಡೆಯಿಂದ ಹೇಳುತ್ತಿದ್ದೆ. ನಾನು ಬಿಯರ್ ಕುಡಿದಿಲ್ಲ ಅಂತಲ್ಲ, ರಿತಿಕ್‌ನೇ ಒಮ್ಮೆ ಮಗ್ ನನ್ನೆದುರಿಗಿಡುತ್ತಾ, ನನಗೊಂದು ಗುಟುಕು ಕುಡಿಯಲು ಹೇಳಿದ್ದ.

‘ಮಂಗನಿಗೇನು ಗೊತ್ತು ಶುಂಠಿಯ ರುಚಿ’, ರಿತಿಕ್ ತಮಾಷೆ ಮಾಡುತ್ತಾ ಹೇಳಿದ್ದ. ನಾನು ಸಹ, ಒಂದು ಗುಟುಕು ಕುಡಿದರೆ, ನಾನೇನು ಕುಡುಕಿಯಂತೂ ಆಗುವುದಿಲ್ಲ ಎಂದು ಯೋಚಿಸಿದೆ. ನಾನು ಬೀಯರ್ ಅನ್ನು ಒಂದು ಗುಟುಕು ಕುಡಿದಿದ್ದೆ. ಅದು ತುಂಬಾ ತಣ್ಣಗಿತ್ತು, ಆದರೂ ಕಹಿಯಾಗಿದ್ದು, ವಿಚಿತ್ರ ರುಚಿಯನ್ನು ಹೊಂದಿತ್ತು. ಜನ ಇದನ್ನು ಹೇಗೆ ಕುಡಿಯುತ್ತಾರೆ? ನನಗೆ ಆಶ್ಚರ್ಯವಾಗಿತ್ತು.

‘ನೀನಿದನ್ನು ಕುಡಿಯಲು ಸಾಧ್ಯವಾಗದಿದ್ದರೆ, ವೈನನ್ನು ಎಂದಿಗೂ ಕುಡಿಯಲಾರೆ’ ಎಂದಿದ್ದ ರಿತಿಕ್. ನಂತರ ರಿತಿಕ್ ನನಗೆಂದೂ ವೈನ್ ಕುಡಿಯಲು ಹೇಳಲಿಲ್ಲ.

ನಾನು ರಿತಿಕ್‌ನನ್ನು ಎಷ್ಟು ಪ್ರೀತಿಸುವೆನೋ, ರಿತಿಕ್ ಸಹ ಅಷ್ಟೇ ನನ್ನನ್ನು ಪ್ರೀತಿಸುತ್ತಾನೆ ಎಂಬುದು ನನಗೆ ತಿಳಿದಿತ್ತು. ಈ ಪ್ರೀತಿಯೇ ನಮ್ಮನ್ನು ಯಾವುದೇ ಸಾಮಾಜಿಕ ಬಂಧನದಿಂದ ಬಂಧಿಸಿರಲಿಲ್ಲ.

ನಾವು ನಮ್ಮ ಮನೆಗೆ ಬಂದು ಮೂರು ತಿಂಗಳುಗಳು ಕಳೆದಿದ್ದವು; ಒಂದು ದಿನ ನಮ್ಮ ಕಾಲೊನಿಯ ಮಹಿಳೆಯರಿಂದ ನನಗೆ ಆಹ್ವಾನವೊಂದು ಬಂತು. ಅದು ‘ಮುತ್ತೈದೆ’ಯರ ಸಮಾರಂಭವಾಗಿದ್ದು, ಮರಾಠಿ ಮಹಿಳೆಯರಲ್ಲಿ ಪ್ರಚಲಿತವಾಗಿದ್ದ ‘ಹಲ್ದಿಕುಂಕುಮ್’ನಂತಿತ್ತು. ಇದರಲ್ಲಿ ವಿವಾಹಿತ ಮಹಿಳೆಯರೇ ಕಲೆಯುತ್ತಾರೆ. ನಾನು ಮೂರು ತಿಂಗಳಿನಲ್ಲಿ ಕಾಲೊನಿಯಲ್ಲಿ ಚಿರಪರಿಚಿತಳಾಗಿದ್ದೆ. ಹೌದು, ಅವಳು ನನ್ನ ಗೆಳತಿಯಾಗಿರಲಿಲ್ಲ. ಆದರೆ ಆತ್ಮೀಯ ಪರಿಚಿತೆಯಾಗಿದ್ದಳು. ಅವಳ ಹೆಸರು ಉಮಾ. ಅವಳು ನನ್ನನ್ನು ರಿತಿಕ್ ಮದುವೆಯಾಗಿದ್ದಾನೆಂದು ತಿಳಿಯುತ್ತಿದ್ದಳು. ನಾನು ಸಹ ಅವಳ ಭ್ರಮೆಗೆ ಭಂಗ ಮಾಡಲಿಲ್ಲ. ನಾನು ಏಕೋ ಏನೋ ಈ ಚರ್ಚೆಯಿಂದ ಈಗ ತಪ್ಪಿಸಿಕೊಳ್ಳುತ್ತಿದ್ದೆ. ನಾನು ಬೈತಲೆಗೆ ಕುಂಕುಮ ಹಚ್ಚಿಕೊಳ್ಳುವುದಿಲ್ಲ. ಮಂಗಳಸೂತ್ರ ಧರಿಸುವುದಿಲ್ಲ, ಕಾಲುಂಗುರ ಹಾಕಿಕೊಳ್ಳುವುದಿಲ್ಲ, ಹೀಗಿರುವಾಗ ನನ್ನನ್ನೇಕೆ ವಿವಾಹಿತೆಯೆಂದು ತಿಳಿಯುತ್ತಾರೆ? ಹೀಗೆ ಯೋಚಿಸಿ ರೇಗುತ್ತಿದ್ದೆ.

ನಾನು ಆಧುನಿಕ ವಿಚಾರಗಳನ್ನು ಹೊಂದಿದ ಮಹಿಳೆ, ಅದಕ್ಕೇ ಮುತ್ತೈದೆತನದ ಆಭರಣಗಳು ಅಥವಾ ಚಿಹ್ನೆಗಳನ್ನು ಧರಿಸುವುದಿಲ್ಲವೆಂದು ಉಮಾ ಯೋಚಿಸುತ್ತಿದ್ದಳು. ಸಮಾರಂಭಕ್ಕೆ ಆಹ್ವಾನ ಬಂದಾಗ, ಉಮಾ ನನ್ನ ಹೆಸರನ್ನು ಅವರಿಗೆ ಸೂಚಿಸಿದ್ದಾಳೆಂದು ತಿಳಿದೆ. ನಾನು ಆ ಸಮಾರಂಭಕ್ಕೆ ಹೋಗಲು ಬಯಸುತ್ತಿರಲಿಲ್ಲ. ನನಗೆ ಯಾವುದೇ ವಿಧದ ಕಪಟ ಇಷ್ಟವಿರಲಿಲ್ಲ. ಹೀಗಾಗಿ ಕೆಲಸದ ಒತ್ತಡವಿದೆಯೆಂದು ನೆಪ ಹೇಳಿದೆ. ಅವರು ನನ್ನ ನೆಪವನ್ನು ಸಹಜವಾಗಿ ಒಪ್ಪಿದರು. ನನಗೆ ಇದರಿಂದ, ನಾನು ಅವರ ವಿಶ್ವಾಸದೊಂದಿಗೆ ಕಪಟವೆಸಗುತ್ತಿದ್ದೇನೆಂದು ದುಃಖವಾಯಿತು.

ನಾವು ಮನೆಯನ್ನು ಖರೀದಿಸಿದ ವಿಷಯ ನನ್ನ ಅಮ್ಮ ಮತ್ತು ರಿತಿಕ್‌ನ ಕುಟುಂಬದವರಿಗೆ ತಿಳಿಯಿತು. ಅಮ್ಮನ ಫೋನ್ ಬಂತು. ಅವರು ಸಂತೋಷವನ್ನು ವ್ಯಕ್ತಪಡಿಸುತ್ತಾ, ನನಗೆ ಮದುವೆ ಮಾಡಿಕೊಳ್ಳುವಂತೆ ಮತ್ತೊಮ್ಮೆ ಸಲಹೆಯನ್ನು ಸಹ ಕೊಟ್ಟರು. ಈ ಬಾರಿ ನಾನು ಅವರ ಸಲಹೆಯನ್ನು ಕೆಡುಕಾಗಿ ನೋಡಲಿಲ್ಲ. ಅಮ್ಮ ಎಷ್ಟಾದರೂ ಅಮ್ಮ, ಅವರು ತಮ್ಮ ಮಗಳ ಹಿತದ ಬಗ್ಗೆಯೇ ಯೋಚಿಸುತ್ತಾರೆ! ಆದರೆ ಅವರು ತಮ್ಮ ದೃಷ್ಟಿಕೋನದಿಂದ ಯೋಚಿಸುತ್ತಾರೆ.

ನಾನು ನನ್ನ ಜೀವನದ ಬಗ್ಗೆ ಸಂತಸದಿಂದ ಇದ್ದೇನೆ ಹಾಗೂ ರಿತಿಕ್‌ನೊಂದಿಗಿರುವುದು ನನಗೆ ಇಷ್ಟವಾಗುತ್ತದೆ ಎಂಬುದನ್ನು ಅಮ್ಮ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ. ಎಲ್ಲರಲ್ಲೂ ಕೊರತೆ ಇರುತ್ತದೆ. ನನಗೆ ರಿತಿಕ್‌ನ ಕೆಲವು ವಿಷಯಗಳು ಇಷ್ಟವಾಗದಿದ್ದರೆ, ಅವನಿಗೂ ಸಹ ನನ್ನ ಕೆಲವು ವಿಷಯಗಳಿಂದ ಕಷ್ಟವಾಗುತ್ತಿತ್ತು. ವಾಸ್ತವವಾಗಿ ಈ ಕೊರತೆಗಳೇ ನಮ್ಮಿಬ್ಬರಿಗೆ ಪರಸ್ಪರ ಪೂರಕವಾಗಿದ್ದವು. ಚುಂಬಕಕ್ಕೆ ವಿರುದ್ಧವಾಗಿ ಧ್ರುವವೇ ಪರಸ್ಪರ ಆಕರ್ಷಿತವಾಗುತ್ತವೆ, ಸಮಾನ ಧ್ರುವಗಳಲ್ಲ.

ರಿತಿಕ್‌ನ ಐವರು ಹಿರಿಯ ಸಹೋದರಿಯರಲ್ಲಿ, ನಾಲ್ಕನೆಯವರು ಯಾವುದೇ ಸೂಚನೆ ಕೊಡದೆ ಅಕಸ್ಮಾತ್ ನಮ್ಮ ಮನೆಗೆ ಬಂದರು. ನನಗೆ ಅವರು ಹೀಗೆ ಬಂದಿದ್ದು ಅಸಂಬದ್ಧವೆಂದು ಕಂಡಿತು. ಆದರೂ ನಾನು ಅವರನ್ನು ಪ್ರೀತಿಯಿಂದ ಸ್ವಾಗತಿಸಿದೆ.

‘ಮನೆಯನ್ನು ತೆಗೆದುಕೊಂಡಿರಿ, ಆದರೆ ನಮಗೆ ಹೇಳಲೇ ಇಲ್ಲ? ನಾವು ಪರಕೀಯರಾದೆವೇ?’ ಅವರು ಚುಚ್ಚುಮಾತಿನಲ್ಲಿ ಹೇಳಿದರು.

‘ಹಾಗೇನಿಲ್ಲ’ ರಿತಿಕ್ ತಡಬಡಿಸಿದ. ಅವನಿಗೂ ಅಕ್ಕ ಹೀಗೆ ಬಂದಿದ್ದರಿಂದ ಆಶ್ಚರ್ಯವಾಗಿತ್ತು.

‘ನಾನು ಚಹಾ ತರ್ತೀನಿ’, ಹೀಗೆಂದು ಅಲ್ಲಿಂದ ನಾನು ಜಾರಿಕೊಂಡೆ. ಆದರೆ ನನ್ನ ಕಿವಿಗಳು ತಮ್ಮ ಅಕ್ಕನ ಮಾತುಗಳನ್ನು ಕೇಳಲು ಉತ್ಸುಕವಾಗಿದ್ದವು.

‘ಬಂಟೂ! ನಿಜವಾಗ್ಲೂ ನೀನು ತುಂಬಾ ಬದಲಾಗಿದ್ದೀಯ!’ ಅಕ್ಕ ರಿತಿಕ್‌ನನ್ನು ಹಳೆಯ ಹೆಸರಿನಿಂದ ಕರೆದಿದ್ದರು. ನಾನು ರಿತಿಕ್‌ನನ್ನು ಈ ಹೆಸರಿನಿಂದ ಕರೆದಿರಲಿಲ್ಲ.

‘ನಾನೇನೂ ಬದಲಾಗಿಲ್ಲ. ಮೊದಲಿನಂತೆಯೇ ಇದ್ದೇನೆ’ ಎಂದ ರಿತಿಕ್.

‘ನಿನಗೆ ಅಪ್ಪಅಮ್ಮನ ನೆನಪಾಗಲ್ವ?’

‘ಆಗುತ್ತೆ’

‘ಮತ್ತೆ?’

‘ಮತ್ತೇನು?’

‘ನೀನೇಕೆ ಅವರಿಂದ ದೂರವಾದೆ?’

‘ನಾನು ಅವರಿಂದ ದೂರವಾಗಿಲ್ಲ, ಅವರೇ ನನ್ನಿಂದ ದೂರವಾಗಿದ್ದಾರೆ. ಒಂದ್ಸಲ ಅಪ್ಪ ಬಂದಿದ್ದರು’ ಎಂದ ರಿತಿಕ್.

‘ಹೌದು, ನನಗೆ ಗೊತ್ತಿದೆ. ಆದ್ರೆ ಅವರನ್ನು ನೋಡಲು ನೀನು ಸಹ ಹೋಗಲ್ಲ’ ಅಕ್ಕ ಹೇಳಿದರು. ನಾನು ಅವರ ಕೆಲವು ಮಾತುಗಳನ್ನು ಕೇಳದಾದೆ; ಏಕೆಂದರೆ ನಾನು ಚಹಾ ಮಾಡುತ್ತಿದ್ದೆ. ಅಡುಗೆ ಮನೆ ವರಾಂಡದಿಂದ ಬೇರೆಯಾಗಿತ್ತು. ಅಲ್ಲಿಯವರೆಗೆ ಅವರ ಮಾತುಗಳು ಕೇಳಿಸುತ್ತಿರಲಿಲ್ಲ. ನಾನು ಬೇಗನೆ ಚಹಾ ಮಾಡಿ, ತಿಂಡಿಯನ್ನು ಪ್ಲೇಟಿನಲ್ಲಿಟ್ಟುಕೊಂಡು ಬಂದೆ. ಆ ತಟ್ಟೆಯನ್ನು ಇಬ್ಬರ ನಡುವೆ ಇಟ್ಟೆ. ನನ್ನ ಉಪಸ್ಥಿತಿಯಲ್ಲಿ ಅವರು ಮನಬಿಚ್ಚಿ ಮಾತನಾಡುವುದಿಲ್ಲವೆಂದು ಯೋಚಿಸಿ, ಅಲ್ಲಿಂದ ಹೊರಟು ಹೋದೆ. ನಂತರ ವರಾಂಡದ ಗೋಡೆಗೆ ಒರಗಿ ನಿಂತು ಅವರ ಮಾತುಗಳನ್ನು ಕೇಳಲಾರಂಭಿಸಿದೆ.

‘ಬಂಟೂ, ಸುಗಂಧಾಳಲ್ಲಿ ಕೆಟ್ಟ ಭಾವನೆಗಳಿವೆ ಎಂದು ನಾನು ಹೇಳುವುದಿಲ್ಲ. ಶಿ ಈಸ್ ಸೋ ನೈಸ್, ಕ್ಯೂಟ್ ಅಂಡ್ ಮ್ಯಾನೇಜಬಲ್. ಆದರೆ ನೀನು ಜೀವನವನ್ನು ಒಂದು ರೀತಿನೀತಿಯಲ್ಲಿ ಸಾಗಿಸು’ ಎಂದರು ಅಕ್ಕ.

‘ಅಕ್ಕಾ, ಬೇರೆ ಮಾತಾಡಿ! ನನಗೆ ಇಂಥ ಸಲಹೆಗಳನ್ನು ಕೇಳಿಕೇಳಿ ಸಾಕಾಗಿ ಹೋಗಿದೆ’ ಎಂದ ರಿತಿಕ್.

‘ಸರಿ, ಆದ್ರೆ ನೀನು ಕೆಲವು ದಿನ ಇಲ್ಲಿಗೆ ಅಮ್ಮನನ್ನು ಕರೆಯಿಸಿಕೋ. ಅವರು ನಿನ್ನನ್ನು ನೋಡಿಕೊಳ್ತಾರೆ, ಅವರು ನಿನ್ನ ಜೊತೆ ಎರಡು ದಿನ ಇದ್ದರೆ ಅವರ ಮನಸ್ಸಿಗೂ ಶಾಂತಿ ಸಿಗುತ್ತೆ. ಅವರು ಸುಗಂಧಾಳನ್ನು ಸಹ ಇಷ್ಟಪಡಬಹುದು’ ಅಕ್ಕ ತಿಳಿಹೇಳಿದರು.

‘ಭಾವ ಹೇಗಿದ್ದಾರೆ? ಅವರ ಕೆಲಸ ಹೇಗೆ ನಡೀತಿದೆ?’ ರಿತಿಕ್ ವಿಷಯಾಂತರ ಮಾಡಿದ. ಅಕ್ಕ ಭಾವನ ಬಗ್ಗೆ ಹೇಳಲಾರಂಭಿಸಿದರು. ನಾನು ಸಹ ವರಾಂಡಕ್ಕೆ ಬಂದೆ. ಹೆಚ್ಚು ಹೊತ್ತು ನಾನು ಅಲ್ಲಿಗೆ ಬರದಿದ್ದರೆ, ಅವರು ಇಲ್ಲಿಗೆ ಬಂದದ್ದು ನನಗೆ ಇಷ್ಟವಾಗಲಿಲ್ಲವೆಂದು ಅನ್ನಿಸಬಹುದು. ನಾನು ಅವರ ಮನಸ್ಸಿನ ಕಹಿಯನ್ನು

